# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.132/2017/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:23.6.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯು:–** ಶಿರಾ ತಾಲ್ಲೂಕು ರಾಮಲಿಂಗಾಪುರ ಗ್ರಾಮಪಂಚಾಯತಿಗೆ ಸೇರಿದ ಜಾನಕಲ್ಲು ಗ್ರಾಮದಲ್ಲಿ ಶ್ರೀಮತಿ ರಂಗಮ್ಮ ಗಂಡ ಕರೆರಂಗಪ್ಪನವರು ಖಾತೆ ನಂ.429/1 ರಲ್ಲಿ ಕಟ್ಟಡ ನಿರ್ಮಿಸಿ ಸಾರ್ವಜನಿಕರಿಗೆ ತೊಂದರೆ ಉಂಟುಮಾಡಿರುವುದರಿಂದ, ಶ್ರೀಮತಿ ರಂಗಮ್ಮನವರು ಸರ್ಕಾರದ ಯಾವುದಾದರೂ ಯೋಜನೆಯಲ್ಲಿ ಅರ್ಹರಾಗಿದ್ದರೆ ಅವರಿಗೆ ಬೇರೆ ಸ್ಥಳದಲ್ಲಿ ಬದಲಿ ನಿವೇಶನ ನೀಡಿ, ಈಗ ನೀಡಿರುವ ಖಾತೆ ನಂ.429/1ನ್ನು ರದ್ದುಗೊಳಿಸಿ, ಅಲ್ಲಿ ಇರುವ ಕಟ್ಟಡವನ್ನು ತೆರವುಗೊಳಿಸಿ ಪೂರ್ಣ ರಸ್ತೆಯನ್ನು ಸಾರ್ವಜನಿಕರಿಗೆ ಮುಕ್ತವಾಗಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ **ನಿರ್ದೇಶನ** ನೀಡುವ ಬಗ್ಗೆ.

--------

ಶ್ರೀ ಉಮೇಶ್, ತಂದೆ ಗೋವಿಂದಪ್ಪ, ಜಾನಕಲ್ ಗ್ರಾಮದ ನಿವಾಸಿ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ರಾಮಾಂಜನೇಯ, ಪಿ.ಡಿ.ಒ. ರಾಮಲಿಂಗಾಪುರ ಗ್ರಾಮ ಪಂಚಾಯತ್, ಶಿರಾ ತಾಲ್ಲೂಕು, (2) ಶ್ರೀ ಮೊಹಮದ್ ಮುಬೀನ್, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಶಿರಾ, (3) ಶ್ರೀ ಹೊನ್ನಶಾಮೇಗೌಡ, ತಹಶೀಲ್ದಾರ್, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ, (ಇನ್ನು ಮುಂದೆ ಕ್ರಮವಾಗಿ 1ರಿಂದ 3ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ಶಿರಾ ತಾಲ್ಲೂಕು ರಾಮಲಿಂಗಾಪುರ ಗ್ರಾಮಪಂಚಾಯತಿಗೆ ಸೇರಿದ ಜಾನಕಲ್ಲು ಗ್ರಾಮದಲ್ಲಿ ರಂಗಮ್ಮ ಗಂಡ ಕರೆರಂಗಪ್ಪ ಎನ್ನುವವರಿಗೆ ಎದುರುದಾರರು ಸಾರ್ವಜನಿಕರು ಹಾಗೂ ದನಕರುಗಳು ಓಡಾಡುವ ದಾರಿಯಲ್ಲಿ ಅಕ್ರಮವಾಗಿ ನಿವೇಶನ ಮಂಜೂರು

ಮಾಡಿದ್ದು, ಈಗ ಅವರು ಮನೆ ನಿರ್ಮಿಸುತ್ತಿರುವುದರಿಂದ ಗ್ರಾಮಸ್ಥರಿಗೆ ತುಂಬಾ ತೊಂದರೆಯಾಗಿರುತ್ತದೆ. ಈ ಗ್ರಾಮದಲ್ಲಿ ಸರ್ಕಾರಿ ಗೋಮಾಳ ಜಾಗವಿದ್ದರೂ, ಈ ರೀತಿ ಸಾರ್ವಜನಿಕರಿಗೆ ರಸ್ತೆಯನ್ನು ಮಂಜೂರು ಮಾಡಿ ತೊಂದರೆಯುಂಟುಮಾಡಿರುತ್ತಾರೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಶ್ರೀಮತಿ ರಂಗಮ್ಮನವರು ಕಡುಬಡವರಾಗಿದ್ದು, ಕಳೆದ 25–30 ವರ್ಷಗಳಿಂದ ಇದೇ ಜಾಗದಲ್ಲಿ 20*20 ಅಡಿ ಜಾಗದಲ್ಲಿ ಗುಡಿಸಲು ಕಟ್ಟಿಕೊಂಡು ವಾಸವಾಗಿದ್ದು, ದಿ.2.6.2014ರಂದು ತನಗೆ ನಿವೇಶನ ಮಂಜೂರು ಮಾಡುವಂತೆ ಅರ್ಜಿ ಸಲ್ಲಿಸಿದಾಗ ಗ್ರಾಮ ಪಂಚಾಯತಿ ಸಭೆಯಲ್ಲಿ ವಿಷಯ ಸಂ.5/1ರಂತೆ ಚರ್ಚಿಸಿ ಅವರಿಗೆ ಗುಡಿಸಲು ಹಾಕಿದ ಜಾಗಕ್ಕೆ ಖಾತೆ ಮಾಡಿಕೊಡಲು ತೀರ್ಮಾನಿಸಲಾಗಿರುತ್ತದೆ. ದಿ.13.11.2015 ರಂದು ತಾ.ಪಂಚಾಯತಿ ಶಿರಾ ಸಾಮಾನ್ಯ ಸಭೆಯಲ್ಲಿ ಠರಾವು ಸಂ.4ರಲ್ಲಿ ಚರ್ಚಿಸಿ, ನಿಯಮಾನುಸಾರ ಕ್ರಮವಹಿಸಲು 1ನೇ ಎದುರುದಾರರಿಗೆ ಸೂಚಿಸಿರುತ್ತಾರೆ. ಆದ್ದರಿಂದ ಖಾತೆ ಸಂ.429/1 ಕ್ಕೆ ಚದರ ಅಡಿ ಒಂದಕ್ಕೆ 4 ರೂ.ಗಳಂತೆ ಕಿಮ್ಮತ್ತಿನ ಮೂಲಕ ನಿವೇಶನದ ಖಾತೆ ಮಾಡಲಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

5. ದೂರುದಾರರು ಸಲ್ಲಿಸಿದ ದೂರು ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಗ್ರಾಮ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಶ್ರೀಮತಿ ರಂಗಮ್ಮನವರಿಗೆ ನಿವೇಶನ ನೀಡಬೇಕೆಂದು ಸರ್ವಾನುಮತದ ತೀರ್ಮಾನ ಮಾಡಿದ ಬಗ್ಗೆ ದಾಖಲೆ ಲಭ್ಯವಿರುತ್ತದೆ. ದೂರುದಾರರಿಗೆ ನೀಡಿದ ನಿವೇಶನವು ಸರ್ವೆ ನಂ.88ರಲ್ಲಿ ಬರುತ್ತಿದ್ದು, ಇದು ರಸ್ತೆಯ ಮಧ್ಯದಲ್ಲಿ ಬರುತ್ತದೆ ಎಂದು ನಕ್ಷೆಯಲ್ಲಿ ಗುರ್ತಿಸಲಾಗಿದೆ. ಈ ನಿವೇಶನ ರಸ್ತೆಯಲ್ಲಿ ಬರುತ್ತಿದ್ದರೂ ಸಹ ದೂರುದಾರರು ಕಳೆದ 25–30 ವರ್ಷಗಳಿಂದ ಇಲ್ಲಿ ಗುಡಿಸಲು ಹಾಕಿಕೊಂಡು ವಾಸ ಮಾಡುತ್ತಿದ್ದಾರೆಂಬ ಕಾರಣಕ್ಕೆ ಅವರಿಗೆ ಖಾತೆ ಮಾಡಲಾಗಿದೆಯೆಂದು ಎದುರುದಾರರು

ಒಪ್ಪಿಕೊಂಡಿರುತ್ತಾರೆ. ದೂರುದಾರರ ಹೆಸರಿನಲ್ಲಿ ಖಾತೆ ಮಾಡಿದ ಬಗ್ಗೆ ಡಿಮಾಂಡ್ ರಿಜಿಸ್ಟರ್ ಲಭ್ಯವಿರುತ್ತದೆ. ಆದರೆ ಯಾವುದೇ ಒಬ್ಬ ವ್ಯಕ್ತಿಗೆ ಆತನ ಸ್ವಾಧೀನತೆ ಅಥವಾ ಆರ್ಥಿಕವಾಗಿ ಕಡುಬಡತನದ ಆಧಾರದ ಮೇಲೆ ಗ್ರಾಮಪಂಚಾಯತಿಯಿಂದ ನಿವೇಶನ ನೀಡುವಾಗ ಸರ್ಕಾರದ ಗೋಮಾಳದ ಜಾಗದಲ್ಲಿ ಅಥವಾ ಪಂಚಾಯತಿಯ ವ್ಯಾಪ್ತಿಯಲ್ಲಿರುವ ಜಾಗದಲ್ಲಿ ನಿವೇಶನ ನೀಡಬೇಕಾಗುತ್ತದೆ. ಆದರೆ ಎದುರುದಾರರು ನಕ್ಷೆಯಲ್ಲಿ ಗುರ್ತಿಸಿರುವಂತೆ ರಸ್ತೆಯ ಮಧ್ಯದಲ್ಲಿ ನಿವೇಶನ ನೀಡಿರುವುದು ಸೂಕ್ತವನಿಸುವುದಿಲ್ಲ. ಈ ನಿವೇಶನ ನೀಡಿದ್ದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗಿದೆಯೆಂದು ದೂರುದಾರರು ಹಾಗೂ ಸಾರ್ವಜನಿಕರು ದೂರು ಸಲ್ಲಿಸಿರುತ್ತಾರೆ.

6. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಶ್ರೀಮತಿ ರಂಗಮ್ಮ ಗಂಡ ಕರೆರಂಗಪ್ಪನವರಿಗೆ ಸರ್ಕಾರದ ಯಾವುದಾದರೂ ಯೋಜನೆಯಲ್ಲಿ ಅರ್ಹರಾಗಿದ್ದರೆ ಅವರಿಗೆ ಬೇರೆ ಸ್ಥಳದಲ್ಲಿ ಬದಲಿ ನಿವೇಶನ ನೀಡಿ, ಈಗ ನೀಡಿರುವ ಖಾತೆ ನಂ.429/1ನ್ನು ರದ್ದುಗೊಳಿಸಿ, ಅಲ್ಲಿ ಇರುವ ಕಟ್ಟಡವನ್ನು ತೆರವುಗೊಳಿಸಿ ಪೂರ್ಣ ರಸ್ತೆಯನ್ನು ಸಾರ್ವಜನಿಕರಿಗೆ ಮುಕ್ತವಾಗಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ **ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

23/6/17.

**[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**

23/6